(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ ತಾವು. ಇಡೀ ದಿನ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರರು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಎನ್ನುವುದನ್ನು ನಾನು ಕೇಳಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ವರ್ತಿಸುವುದು ನಿಜವಾಗಿ ನಮಗೆ ನೋವು ತಂದಿದೆ. ತಾವು ನಮ್ಮ ರಕ್ಷಣೆ ಮಾಡಬೇಕು ತಾವು ಸ್ಪೀಕರ್. ಮಾತು ಮಾತಿಗೂ ಜನ ಬಾಯಿ ಬಡಿದುಕೊಳ್ಳುತ್ತಾರೆ ಅಂದರೆ ಏನು? ಜನರು ಅವರ ಸ್ಥಿತಿ ನೋಡಿ ಬಾಯಿ ಬಡಿದುಕೊಂಡರೆ ಅದಕ್ಕೆ ನಾವು ಹೊಣೆಯೇ?

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು, ಇತರೆ ಪಕ್ಷಗಳ ನಾಯಕರುಗಳು ಹಾಗೂ ಇತರೆ ಸದಸ್ಯರುಗಳು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆಗೆ ಸಂಬಂಧಿಸಿದಂತೆ ಕೆಲವು ವಿಚಾರಗಳ ಬಗ್ಗೆ ಕ್ರಿಯಾಲೋಪವನ್ನು ಎತ್ತಿರುತ್ತಾರೆ. ಆದೆಲ್ಲಾವನ್ನು ನಾನು ಕೇಳಿದ್ದೇನೆ. ಆದ್ದರಿಂದ ನಾನು ಈ ರೂಲಿಂಗ್ ಕೊಡುತ್ತಿದ್ದೇನೆ.

5. ಸಭಾಧ್ಯಕ್ಷರ ತೀರ್ಪು

ವಿಷಯ: ದಿನಾಂಕ19-1-06ರಂದು ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣ ನಿಷ್ಫಲವಾಗಿರುತ್ತದೆ.

ಮಾನ್ಯ ವಿರೋಧಪಕ್ಷದ ನಾಯಕರು, ಹಾಗೂ ಇತರೆ ಪಕ್ಷಗಳ ನಾಯಕರುಗಳು ಹಾಗೂ ಇತರೆ ಸದಸ್ಯರುಗಳು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆಗೆ ಸಂಬಂಧಿಸಿದಂತೆ ಕ್ರಿಯಾಲೋಪವನ್ನು ಎತ್ತಿರುತ್ತಾರೆ.

ಈ ದಿಸೆಯಲ್ಲಿ ನಾನು ಸದನಕ್ಕೆ ಈ ಮೂಲಕ ತಿಳಿಸುವುದೇನೆಂದರೆ, ಸಂವಿಧಾನದ ಅನುಚ್ಛೇದ 176ರ ಮೇರೆಗೆ ಘನತೆವೆತ್ತ ರಾಜ್ಯಪಾಲರು ದಿನಾಂಕ 19.01.2006 ರಂದು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಆದರೆ, ಸದರಿ ಭಾಷಣಕ್ಕೆ ಅಂದಿನ ಸರ್ಕಾರ ವಂದನಾರ್ಪಣಾ ನಿರ್ಣಯವನ್ನು ಮಂಡಿಸಿರುವುದಿಲ್ಲ. ಫತನ್ಮಧ್ಯೆ ದಿನಾಂಕ 03.02.2006ರಂದು ಹೊಸ ಸರ್ಕಾರವು ಅಸ್ತಿತ್ವಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ 19.01.2006 ರಂದು ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನಾರ್ಪಣಾ ನಿರ್ಣಯವನ್ನು ಮಂಡಿಸದೇ ಆ ಸರ್ಕಾರವು ರಾಜೀನಾಮೆ ನೀಡಿರುವುದರಿಂದ ದಿನಾಂಕ 06.03.1991 ರಂದು ಲೋಕಸಭೆಯ ಸಭಾಧ್ಯಕ್ಷರು ತಳೆದ ಅಭಿಪ್ರಾಯದಂತೆ, ದಿನಾಂಕ 19.01.2006 ರಂದು ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣವು ನಿಷ್ಫಲವಾಗಿರುತ್ತದೆ. (ಕೌಲ್ ಅಂಡ್ ಶಕ್‌ಧರ್ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್ ಪುಟ 208)

ಆದುದರಿಂದ, ದಿನಾಂಕ 24.02.2006 ರಂದು ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣವು ಈಗ ಸದನದ ಮುಂದಿದೆ ಹಾಗೂ ಘನತೆವೆತ್ತ ರಾಜ್ಯಪಾಲರಿಗೆ ಗೌರವ ಸೂಚಿಸುವುದು ಈ ಸದನದ ಆದ್ಯ ಕರ್ತವ್ಯವಾಗಿರುತ್ತದೆ.

ಆದಕಾರಣ, ಘನತೆವೆತ್ತ ರಾಜ್ಯಪಾಲರಿಗೆ ವಂದನಾರ್ಪಣೆ ಸಲ್ಲಿಸಲು ಅವಕಾಶವನ್ನು ಕಲ್ಪಿಸಿ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 25ರ ಮೇರೆಗೆ ದಿನಾಂಕ 24.02.2006 ರಂದು ಘನತೆವೆತ್ತ ರಾಜ್ಯಪಾಲರು ಮಾಡಿರುವ ಭಾಷಣದ ಮೇಲೆ ಚರ್ಚಿಸಲು ಅನುಮತಿಯನ್ನು ನೀಡುತ್ತಿದ್ದೇನೆ.

ಈಗ ಮಾನ್ಯ ಮಹದೇವ್ ಪ್ರಸಾದ್‌ರವರು.

ಅಧ್ಯಕ್ಷರು: ಆಯಿತು ಕುಳಿತುಕೊಳ್ಳಿ. ಅವಕಾಶ ಕೊಟ್ಟಿದ್ದೇನೆ, ರೂಲಿಂಗ್ ಕೊಟ್ಟಿದ್ದೇನೆ.....

ಶ್ರೀ ಧರ್ಮಸಿಂಗ್: 175(1)ರಲ್ಲಿ ಮಾಡಲಿಕ್ಕೇ ಆಗುವುದಿಲ್ಲ.

(ಗೊಂದಲ)

(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸೇರಿದಂತೆ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿದರು)

(ಗೊಂದಲ)

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ

ಶ್ರೀ ಹೆಚ್.ಎಸ್. ಮಹದೇವಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"2006ರ ಫೆಬ್ರವರಿ 24ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ."

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

(ಗೊಂದಲ)

ಪ್ರಸ್ತಾವವನ್ನು ಮಂಡಿಸಲಾಯಿತು.

6. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ಸಂವಿಧಾನದಡಿಯಲ್ಲಿ ಗೌರವಾನ್ವಿತ ಮಾನ್ಯ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಪ್ರತಿಯಾಗಿ ಸದನ ಅವರಿಗೆ ವಂದನೆ ಅರ್ಪಿಸತಕ್ಕಂಥದ್ದು ಸತ್‌ಸಂಪ್ರದಾಯವಾಗಿ ನಡೆದುಕೊಂಡು ಬಂದಿರತಕ್ಕಂಥ ಒಂದು ಪರಂಪರೆ. ಇದು ಒಂದು ಸದನದ ಕರ್ತವ್ಯವೂ ಕೂಡ ಆಗಿದೆ. ಇಂಥ ಒಂದು ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ಅಗೌರವ ಸೂಚಿಸುವ ರೀತಿಯಲ್ಲಿ . . . . .

(ಗೊಂದಲ)

(ಬಾವಿಯಲ್ಲಿ ಕಾಂಗ್ರೆಸ್ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು: ದಯಮಾಡಿ, ನಿಮ್ಮ ಆಸನಗಳಿಗೆ ಹೋಗಿ. ಈಗ I have given my ruling. ನೀವು ಹೇಳಿದ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಕೊಟ್ಟಿದ್ದೇನೆ. ದಯಮಾಡಿ, ನಿಮ್ಮ ನಿಮ್ಮ ಆಸನಗಳಿಗೆ ಹೋಗಬೇಕು. ವಂದನಾ ನಿರ್ಣಯವನ್ನು ಮಂಡನೆ ಮಾಡಿ ಮಾತನಾಡುವುದಕ್ಕೆ ನೀವು ಅವಕಾಶ ಕೊಡಬೇಕು.